ಇ) ಮೂಡಬಿದರೆಯಲ್ಲಿ ಸೆಕ್ಷನ್ ಆಫೀಸನ್ನು ಸಬ್-ಡಿವಿಜನ್ ಆಫೀಸಾಗಿ ಪರಿವರ್ತಿಸಲಾಗುವುದೆಂದು ಸದನದಲ್ಲಿ ಇತ್ತಿದ್ದ ಆಶ್ವಾಸನೆಯನ್ನು ಯಾವಾಗ ಕಾರ್ಯಗತಗೊಳಿಸಲಾಗುವುದು?

ಶ್ರೀ ಕೆ.ಎ. ನಿಸಾರ್ ಅಹಮದ್ (ಇಂಧನ ರಾಜ್ಯ ಸಚಿವರು): ಎ) ಮೂಡಬಿದರೆಯಲ್ಲಿ ಸಬ್-ಸ್ಟೇಷನ್ ಕಾರ್ಯಾರಂಭ ಮಾಡಿದ ನಂತರ ವಿದ್ಯುತ್ ಸರಬರಾಜು ಗಣನೀಯವಾಗಿ ಸುಧಾರಣೆ ಗೊಂಡಿದೆ ಮತ್ತು ಹೆಚ್ಚಿನ ಪ್ರಮಾಣದ ತೊಂದರೆ ಉಂಟಾಗುತ್ತಿಲ್ಲ.

ಬಿ) ಮೂಡಬಿದರೆಯ 110-11 ಕೆವಿ ಸಬ್-ಸ್ಟೇಷನ್ನಿನಲ್ಲಿ ಈಗಾಗಲೇ 10 ಎಂವಿಎ ಸಾಮರ್ಥ್ಯದ ಪವರ್ ಟ್ರಾನ್ಸ್‌ಫಾರ್ಮರ್ ಕಾರ್ಯನಿರ್ವಹಿಸುತ್ತಿದ್ದೆ. ಹೀಗಾಗಿ ಈ ಸಬ್-ಸ್ಟೇಷನ್ನಿಗೆ ಪವರ್ ಟ್ರಾನ್ಸ್ಫಾರ್ಮರ್ನ್ನು ಒದಗಿಸುವ ಪ್ರಶ್ನೆ ಉದ್ಭವಿಸುವುದಿಲ್ಲ. ಸದರೀ ವಿದ್ಯುತ್ ಸಬ್-ಸ್ಟೇಷನ್ನಿನ ಪಾಳಿ ಕೆಲಸ ಮತ್ತು ನಿರ್ವಹಣೆ ಕೆಲಸಕ್ಕೆ ಅಗತ್ಯವಿರುವ ಹುದ್ದೆಗಳನ್ನು ಮಂಜೂರು ಮಾಡಲಾಗಿದೆ. ನಿರ್ವಹಣೆ ಕೆಲಸಕ್ಕೆ ಮಂಜೂರಾಗಿರುವ ಹುದ್ದೆಗಳನ್ನು ಈಗಾಗಲೇ ಭರ್ತಿ ಮಾಡಲಾಗಿದ್ದು, ಪಾಳಿ ಕೆಲಸಕ್ಕೆ ಮಂಜೂರಾಗಿರುವ ಹುದ್ದೆಗಳನ್ನು ಆದಷ್ಟು ಜಾಗ್ರತೆ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಸಿ) ಇದರ ಬಗ್ಗೆ ಅಗತ್ಯವಿರುವ ಅಂಕಿ ಅಂಶ ಮತ್ತು ಮಾಹಿತಿಗಳನ್ನು ಸಂಗ್ರಹಿಸಲಾಗಿದ್ದು, ಪ್ರಸ್ತಾವನೆಯನ್ನು ರೂಪಿಸಲಾಗುತ್ತಿದೆ. ಆದಷ್ಟು ಶೀಘ್ರಗತಿಯಲ್ಲಿ ಪ್ರಸ್ತಾವನೆಯನ್ನು ರೂಪಿಸಿ, ಮಂಡಳಿಯ ಮಂಜೂರಾತಿ ಪಲ್ಲಿಸಲಾಗುವುದು.

ಕಟೀಲು ಬೈಪಾಸು ರಸ್ತೆ ನಿರ್ಮಾಣ ಕುರಿತು

578-ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದರೆ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಎ) ಕಟೀಲು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಬಳಿ ಅಗಲ ಕಿರಿದಾದ ರಸ್ತೆಯಿಂದಾಗಿ ಯಾವಾಗಲೂ ವಾಹನ ತಪ್ಪ ಇರುವ ಕಾರಣ, ಬೈಪಾಸು ರಸ್ತೆ ರಚನೆ ಯಾವಾಗ ಮಾಡಲಾಗುವುದು?

ಬಿ) ಕಳೆದ ವರ್ಷದ ಅಧಿವೇಶನದಲ್ಲಿ ಈ ರಸ್ತೆಯನ್ನು ಕೂಡಲೇ ಮಾಡಲಾಗುವುದು ಎಂದು ತಿಳಿಸಿದರೂ ಸರಕಾರ ಈ ತನಕ ಕ್ರಮ ಕೈಗೊಳ್ಳದಿರಲು ಕಾರಣವೇನು?

ಸಿ) ಈ ಬೈಪಾಸ್ ರಸ್ತೆ ರಚಿಸಲು ಎಷ್ಟು ಖರ್ಚಾಗಬಹುದು?

ಶ್ರೀ ಕೆ.ಪಿಚ್. ರಂಗನಾಥ್ (ಲೋಕೋಪಯೋಗಿ ಸಚಿವರು): ಎ) ಸದರಿ ಬೈಪಾಸ್ ರಸ್ತೆ ನಿರ್ಮಾಣಕ್ಕೆ ಸುಮಾರು 11 ಎಕರೆ ಖಾಸಗಿ ಜಮೀನನ್ನು ಭೂಸ್ವಾಧೀನ ಪಡಿಸಬೇಕಿದ್ದು, ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಬಿ) 1993-94ನೇ ಸಾಲಿನ ಆಯವ್ಯಯದಲ್ಲಿ ಅನುದಾನದ ಕೊರತೆಯಿಂದಾಗಿ ಈ ಕಾಮಗಾರಿಯನ್ನು ತೆಗೆದುಕೊಳ್ಳಲಾಗಲಿಲ್ಲ. 1994-95ನೇ ಸಾಲಿನಲ್ಲಿ ಈ ಕಾಮಗಾರಿಯನ್ನು ತೆಗೆದುಕೊಳ್ಳುವ ವಿಷಯವು ಪರಿಶೀಲನೆಯಲ್ಲಿದೆ.

ಸಿ) ಸುಮಾರು 25 ಲಕ್ಷ ರೂ.ಗಳ ಅಂದಾಜು ಆಗುತ್ತದೆ.

ಕಂದಿ ಅಣೆಕಟ್ಟು ನಿರ್ಮಾಣ ಕುರಿತು

579 - ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದರೆ): ಮಾನ್ಯ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಗಾರ್-ಕಮಂಡಲೆಯ ಕಿಂ ಅಕೌಂಟ್‌ಗೆ ಎಷ್ಟು ಖರ್ಚು ತಗಲಬಹುದು?

ಬ) ಯಾವುದೆ ಎಷ್ಟು ಎಕರೆ ಪ್ರದೇಶಕ್ಕೆ ಸೀಮಿತ ಪ್ರಮಾಣ ಲಭಿಸುವುದು?

ಇ) ಜನರು ಅಲ್ಲಿ ಕಮ್ಮು ಮೇಸಲು ಉಪ್ಪುಕಾರಾಗಿದ್ದು, ಸರ್ಕಾರ ಅಣೆಕಟ್ಟಿನ ನಿರ್ಮಾಣ ಯಾವಾಗ ಮಾಡುವುದು?

ಈ) ಆ ಅಣೆಕಟ್ಟಿನ ನಿರ್ಮಾಣದಿಂದ ಎರಮೂ ಕಡೆಯ ಜನರಿಗೆ ನದಿ ನೀರಿನ ಬಳಕೆಯ ಅನುಕೂಲ ಆಗುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೆ?

ಡಾ॥ ಅ.ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯ ಸಚಿವರು):

ಅ) ಸುಮಾರು 15.00 ಲಕ್ಷಗಳು.

ಆ) ಸುಮಾರು 150 ಎಕರೆಗೆ ನೀರಾವರಿ ಸೌಲಭ್ಯ ಒದಗಿಸಬಹುದು.

ಇ) ಕಾಮಗಾರಿಯ ಶಕ್ಯತಾನುಸಾರ ಮತ್ತು ಅಂಯವ್ಯಯದಲ್ಲಿ ಸೇರ್ಪಡೆಯಾದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಈ) ಬಂದಿದೆ.

ಕಲಘಟಗಿಯ ವಿದ್ಯುತ್ ಮಂಡಳಿಗೆ ಎಲ್ಲ ರೀತಿಯ ಸೌಲಭ್ಯಗಳನ್ನು ಒದಗಿಸುವ ಬಗ್ಗೆ

401 - ಶ್ರೀ ಜಿ.ಸಿ. ಸಿದ್ದನಗೌಡರ್ (ಕಲಘಟಗಿ): ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಲಘಟಗಿಯಲ್ಲಿ ಹೊಸದಾಗಿ ವಿದ್ಯುಚ್ಛಕ್ತಿ ಮಂಡಳಿಯ ಸೆಕ್ಷನ್ ಆಫೀಸನ್ನು ತೆರೆಯಲಾಗಿದೆಯೇ?

ಆ) ಹಾಗಿದ್ದಲ್ಲಿ ಆ ಕಛೇರಿಯ ಅಧಿಕಾರಿಗಳಿಗೆ ಹಾಗೂ ಸಿಬ್ಬಂದಿ ವರ್ಗದವರಿಗೆ ಜೀಪು ಹಾಗೂ ಇತರ ಸೌಲಭ್ಯಗಳನ್ನು ನೀಡಲೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಆ ತಾಲ್ಲೂಕಿನಲ್ಲಿ ಲೈನ್‌ಮ್ಯಾನ್ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ಆ ಕಛೇರಿಗೆ ಎಲ್ಲಾ ಸೌಲಭ್ಯಗಳನ್ನು ಒದಗಿಸಲು ಹಾಗೂ ಲೈನ್‌ಮ್ಯಾನ್‌ಗಳನ್ನು ನೇಮಿಸಲು ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು):

ಅ) ಇಲ್ಲ. 1991ರಲ್ಲೇ ಮಂಡಳಿಯ ಉಪ ವಿಭಾಗೀಯ ಕಛೇರಿಯನ್ನು ಕಲಘಟಗಿಯಲ್ಲಿ ಪ್ರಾರಂಭಿಸಲಾಗಿದೆ.

ಆ) ಈ ಉಪ ವಿಭಾಗಕ್ಕೆ ಅಗತ್ಯವಿರುವ ಜೀಪು ಮತ್ತು ಕಛೇರಿಗೆ ಬೇಕಾಗುವ ಸಾಮಗ್ರಿಗಳನ್ನು ಮಂಡಳಿಯು ಒದಗಿಸಿದೆ.

ಇ) ಹೌದು

ಈ) ಪ್ರಶ್ನೆಯ 'ಅ' ಭಾಗಕ್ಕೆ ನೀಡಿರುವ ಉತ್ತರದಿಂದ ಜೀಪು ಮತ್ತು ಕಛೇರಿ ಸಾಮಗ್ರಿಗಳನ್ನು ಒದಗಿಸುವ ಪ್ರಶ್ನೆ ಉದ್ಭವಿಸುವುದಿಲ್ಲ. ಖಾಲಿ ಇರುವ ಲೈನ್‌ಮ್ಯಾನ್ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು.

ಕರ್ನಾಟಕ ವಿದ್ಯುತ್ ಮಂಡಳಿಯು ವಿದ್ಯುತ್ ದರ ಪರಿಷ್ಕರಿಸುವ ಬಗ್ಗೆ

660 - ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್): ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?